ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ ಅರಣ್ಯ ಸಚಿವರು

ಅ) ಹೌದು

ಆ) ಕಾಡಾನೆಗಳು ಅರಣ್ಯ ಇಲಾಖೆಯ ದೊರೆಸಾನಿಪಾಳ್ಯದ ಸಂಶೋಧನೆ ನೆಡುತೋಪಿನಲ್ಲಿ ಮತ್ತು ಆರ್.ಬಿ.ಐ. ಲೈಟ್‌ನ ಮಾವಿನ ತೋಪಿನಲ್ಲಿ ಬೀಡು ಬಿಟ್ಟಿತ್ತು.

ಇ) ಸುಮಾರು 5 ಎಕರೆ ಜಮೀನಿನಲ್ಲಿ ಬೆಳೆದಿದ ಸೀಮೆ ಬದನೆಕಾಯಿ ಫಸಲನ್ನು ಹಾಳು ಮಾಡಿರುತ್ತವೆ.

ಈ) ನಗರದ ಹೊರವಲಯಕ್ಕೆ ಕಾಡಾನೆಯ ಪ್ರವೇಶವನ್ನು ತಡೆಗಟ್ಟಲು ಆನೆ ನಿರೋಧಕ ಕಂದಕಗಳನ್ನು ಹಾಗೂ ಕಲ್ಲಿನ ಗೋಡೆಗಳನ್ನು ಹಂತ ಹಂತವಾಗಿ ನಿರ್ಮಿಸಲು ಯೋಚಿಸಲಾಗಿದೆ.

ಉ) ಬೆಂಗಳೂರು ನಗರದ ಹೊರವಲಯಕ್ಕೆ ಒಟ್ಟು 33 ಆನೆಗಳು ಧಾವಿಸಿದ್ದವು.

ಊ) ಬೆಳಗಳ ನಷ್ಟದ ಬಗ್ಗೆ ಅರ್ಜಿಗಳು ತಡವಾಗಿ ಬಂದಿದ್ದರಿಂದ ಸ್ಥಳ ಪರಿಶೀಲಿಸಿ ಅಂದಾಜು ಮೌಲ್ಯಮಾಪನ ಮಾಡುವ ಕಾರ್ಯ ನಡೆಸಲಾಗುತ್ತಿದೆ.

ಋ) ತಪಾಸಣೆ ವರದಿಗಳು ಬಂದನಂತರ ಸೂಕ್ತ ಎಕ್ಸ್‌ಗ್ರೇಷಿಯ ಪರಿಹಾರಧನ ಮಂಜೂರು ಮಾಡಲಾಗುವುದು.

ಬೆಂಗಳೂರು ನಗರದಲ್ಲಿರುವ ಆಸ್ಪತ್ರೆಗಳು

374(715) ಶ್ರೀ ಎಸ್. ರಾಜಣ್ಣ (ಭಾರತೀನಗರ) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

1. ರಾಜ್ಯದಲ್ಲಿ ಸರ್ಕಾರಿ ಜಿಲ್ಲಾ ಮತ್ತು ಪ್ರಧಾನ ಆಸ್ಪತ್ರೆಗಳ ಸಂಖ್ಯೆ ಎಷ್ಟು?

2. ಇವುಗಳ ಪೈಕಿ ಬೆಂಗಳೂರು ನಗರದಲ್ಲಿರುವ ಆಸ್ಪತ್ರೆಗಳ ಸಂಖ್ಯೆ ಎಷ್ಟು?

3. ಈ ಆಸ್ಪತ್ರೆಗಳ ಕಾರ್ಯ ಚಟುವಟಿಕೆಗಳಿಗೆ ಜಾಗೃತ ದಳ ನೇಮಿಸಲು ಪ್ರಸ್ತಾವನೆ ಸಲ್ಲಿಸಲಾಗಿದೆಯೇ?

4. ಹಾಗಿದ್ದಲ್ಲಿ ದಳದ ಪ್ರಸ್ತಾವನೆಯ ವಿವರಗಳನ್ನು ನಮೂದಿಸುವುದು.

ಡಾ: ಹೆಚ್. ಸಿ. ಮಹದೇವಪ್ಪ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು.

1. ರಾಜ್ಯದಲ್ಲಿ 53 ಸರ್ಕಾರಿ ಜಿಲ್ಲಾ ಮತ್ತು ಪ್ರಧಾನ ಆಸ್ಪತ್ರೆಗಳಿರುತ್ತದೆ (ವಿವರಗಳ ಪಟ್ಟಿ ಲಗತ್ತಿಸಿದೆ).

2. ಬೆಂಗಳೂರು ನಗರದಲ್ಲಿ 9 ಪ್ರಧಾನ ಆಸ್ಪತ್ರೆಗಳಿವೆ (ವಿವರ ಲಗತ್ತಿಸಿದೆ).

3. ಈ ರೀತಿಯ ಯಾವುದೇ ಪ್ರಸ್ತಾವನೆ ಇಲ್ಲ.

4. ಮೇಲಿನ 3ನೇ ಪ್ರಶ್ನೆಗೆ ನೀಡಿರುವ ಉತ್ತರದಿಂದಾಗಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.